# ಹಾದಿ ಬದಿ

ಸ್ವಾಭಿಮಾನದ ಕಾಲುಹಾದಿ ಬದಿ
ನಿರಾಯಾಸ ಹೊರಟಿದ್ದೆ
ಗುನುಗುಡುತ್ತ ನನ್ನಷ್ಟಕ್ಕೆ.

ಪಕ್ಕದಲಿ ಕೊಳಕು ಕೊಳದೊಳಗೆ
ಈಸುತಿದ್ದವರ ನೋಡಿಯೂ ನೋಡದೇ
ಸಾಗಿದೆ ಮುಂದೆ


ದಢಾರನೇ
ಹಿಂಬದಿಯಿಂದ ಬಂದ ಕೆಲವರು
ಎಳೆದು ಕೆಡವಿದರು ತಮ್ಮ ಆ ಕೊಳದಲ್ಲಿ,
ಥೀ, ಆ ದುರ್ನಾತ
ದುರ್ಗಿತ ದುರ್ನಾದ ದುರ್ವಾಣಿ
ಅಲ್ಲಿ ತೆವಳುತ್ತಿದ್ದ ಹುಳುಗಳಿಗೂ ಕಾಳಕೂಟ.

ತಟ್ಟನೇ ಕೊಡವಿಕೊಂಡೆದ್ದೆ
ತಪ್ಪಿಸಿಕೊಂಡೆ ಓಡಿ ಹೊರಬಂದೆ
ಓಡುತ್ತ ಓಡುತ್ತ ದೂರ ಬಂದೆ

ತಮ್ಮ ಕೊಳಕು ಕೊಳ ಬಿಟ್ಟು
ಹೊರಬರದ ಹುಳು ಜಂತು ಜೀವ
ನನ್ನ ಬೆಂಬಲಿಸಿ ಬರಲಾಗದಷ್ಟು
ದೂರ ನಡೆದು ಬಂದಿದ್ದೇನೆ.

ಅರ್ಥವಾಗಿದೆ ಈಗ ಅತ್ತಿತ್ತ
ಹರಡಿ ಚೆಲ್ಲಿರಬಹುದಾದ ದುರ್ಗಂಧ ಲೋಕದ
ಹಾಡು
ಅರಿವಾಗತೊಡಗಿದೆ ನನ್ನ ಮೋಹನ ಹಾಡು
ಸಾಕೆನಗೆ ನನ್ನ ಪಾಡು.





# ಕುಸಿತ

ಹಿಮಾಚಲ ಬೆಟ್ಟ ಗುಡ್ಡ ಕುಸಿಯುತ್ತಿವೆ
ಭಯಂಕರ ಸದ್ದು,
ಉರುಳುರುಳಿ ಕೊಳ್ಳಕ್ಕೆ ಬೀಳುತ್ತಿವೆ

ನಿನ್ನೆ ರಾತ್ರಿಯ ತನಕ
ಊಹಾತೀತ ವರ್ಣನಾತೀತ
ಪ್ರಲಯೋದ್ಘಟ ಪ್ರಾಣಾಂತಕ ಆಘಾತಕರ
ಆರ್ಭಟ ಸದ್ದು ಗದ್ದಲ ದೃಶ್ಯಾವಳಿ

ಇಂದು ನಸುಕಿನಲೆದ್ದು ನೋಡಿದೆ
ನಂಬಲಸಾಧ್ಯ ಪ್ರಶಾಂತಿ
ಎಂದಿನಂಥದೇ ಸೂರ್ಯೋದಯ
ಗೀತಮಯ ವದನೋದಯ

ಅವ್ವಾ, ಹೇಗೆ ಹೀಗಾದರೆ...
ಗುನುಗುಟ್ಟೆ, ಕಿವಿಗೊಟ್ಟು ಕೇಳಿದೆ
ಉಲಿಯಬಹುದು ಏನಾದರೂ...

'ಇದು ಬದುಕು ಬವಣೆ
ನೆಲ ನೆಲೆಯನರಿವ ಮೊದಲೆ ತಿಳಿಯದಲೆ
ನೀನಾಗಿ ಬಯಸಿದ್ದ ಕವಡ ಕವಣೆ
ಹೇರಿಕೊಂಡದ್ದು ಬೇಕಾಗಿ ಕಟ್ಟಿಕೊಂಡದ್ದು
ಅಪ್ಪಿಕೊಂಡದ್ದು ಒಪ್ಪಿಕೊಂಡದ್ದು...'

ತೊದಲಿತು ಬಾಯಿ ಕಟ್ಟಿತು
ಮಗ್ಗುಲು ಹೊರಳಿಸಿದಳು ಅವ್ವ
ಅಂದಿನಂತೆ
ಎಂದಿನಂತೆ
ರಾತ್ರಿ ಘೋರ್ಗರೆದ ಕ್ರಾಂತ ಅವಿಶ್ರಾಂತ
ನತದೃಷ್ಟ ಮಹಾಪ್ರಲಯದಂತೆ.